ಸಾಕ್ಷಿ ಯನ್ನು ದಿಃ 23.12.2025 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

1. ಆರೋಪಿ ಎಸ್.ಬಿ.ಐ ಬ್ಯಾಂಕ್ ಬಳಿ ಮಧ್ಯಾಹ್ನ 12 ಗಂಟೆಗೆ ಬಂದಿದ್ದರು.
2. ನೀವು ಬಿಜೆಪಿ ಪಕ್ಷದ ಮುಖಂಡರು ಎಂದರೆ ಸರಿ. ನೀವು ಮಾಜಿ ನಗರಸಭೆ ಅಧ್ಯಕ್ಷರು ಎಂದರೆ ಸರಿ.
3. ನೀವು ಈ ನ್ಯಾಯಾಲಯದಲ್ಲಿ ಹಾಗೂ ಮಾನ್ಯ ಹಿರಿಯ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಕೇಸ್ ಹಾಕಿಕೊಂಡು, ಸದರಿ ಪಕ್ಷಗಾರರಿಂದ ಹಣ ಪಡೆದು ಕೇಸ್ ರಾಜಿ ಮಾಡಿಕೊಂಡಿದ್ದೀರಾ ಎಂದರೆ ಸರಿಯಲ್ಲ.
4. 2017 ರಲ್ಲಿ ಎಸ್.ಬಿ.ಎಂ ಬ್ಯಾಂಕ್ ಎಸ್.ಬಿ.ಐ ಜೊತೆ ವಿಲೀನವಾದ ವಿಚಾರ ಗಮನದಲ್ಲಿ ಇದ್ದಕಾರಣ ಹೊಸ ಚೆಕ್ ಪಡೆಯಲು ತೊಂದರೆ ಇತ್ತಾ ಎಂದರೆ, ಕೇಳಿದರೂ ವಿಶ್ವಾಸದಿಂದ ನೀಡಿರುತ್ತಾರೆ ಎಂದು ನುಡಿಯುತ್ತಾರೆ.
5. ನೀವು ಬಿಜೆಪಿ ಮುಖಂಡರಾದ ಕಾರಣ ಬ್ಯಾಕ್ ಜೊತೆ ಷರೀಕ್ ಆಗಿ ಚೆಕ್ ಊರ್ಜಿತವಾಗಿದ್ದರೂ ಸಹ ಸಾಕಷ್ಟು ಹಣ ಇಲ್ಲ ಎಂದು ಸುಳ್ಳು ಹಿಂಬರಹ ಪಡೆದುಕೊಂಡಿದ್ದೀರಾ ಎಂದರೆ ಸರಿಯಲ್ಲ.
6. ನೀವು ನಿಮ್ಮ ದೂರಿನಲ್ಲಿ ಹಾಗೂ ನೊಟೀಸಿನಲ್ಲಿ ಪೂರ್ಣಿಮಾ ಕೆ. ಕುಟ್ಟಪ್ಪ ನಾಯರ್ ಎಂದು ಬರೆಸಿದ್ದೀರಾ ಎಂದರೆ ಸರಿ.
7. ಆರೋಪಿ ಹೆಸರು ಪೂರ್ಣಿಮಾ ಎ.ಜೆ ಎಂದರೆ ಸರಿಯಲ್ಲ.
8. ಆರೊಪಿ ಜಮೀನು ಖರೀದಿಸಿದಾಗ ಮಾಡಿದ ಪತ್ರಕ್ಕೆ ನೀವು ಸಹಿ ಹಾಕಿದ್ದೀರಾ ಎಂದರೆ ಸರಿ. ಸಾಕ್ಷಿ ಸದರಿ ದಾಖಲೆಯಲ್ಲಿನ ತಮ್ಮ ಸಹಿ ನೋಡಿ ಗುರುತಿಸಿರುತ್ತಾರೆ. ದಿಃ 04.05.2024 ರಂದು ಶ್ವೇತಾ ಎಂಬುವವರಿಂದ ಆರೋಪಿ ಖರೀದಿ ಮಾಡಿದ್ದು, ಅದಕ್ಕೆ ನೀವು ಸಾಕ್ಷಿಯಾಗಿ ಸಹಿ ಮಾಡಿದ್ದೀರಾ ಎಂದರೆ ಸರಿ. ಸದರಿ ಪತ್ರದಲ್ಲಿ ಪೂರ್ಣಿಮ ಎ.ಜೆ ಎಂದು ನಮೂದು ಇದೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನಿಡಿ - 1 ಎಂದು, ದೂರುದಾರರ ಸಹಿಯನ್ನು ನಿಡಿ - 1(ಎ) ಎಂದು ಗುರುತಿಸಲಾಯಿತು.
9. ಆರೋಪಿ ಕೆಲಸ ಮಾಡುವ ಸ್ಥಳದಲ್ಲಿ ಸಹ ಅವರ ಹೆಸರು ಪೂರ್ಣಿಮಾ ಎ.ಜೆ ಎಂದು ಇದೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ.

10. ಆರೋಪಿಯ ಹೆಸರು ಅವರ ಬ್ಯಾಂಕ್ ಖಾತೆಯಲ್ಲಿ ಸಹ ಪೂರ್ಣಿಮಾ ಎ.ಜೆ ಎಂದು ಇದೆ ಎಂದರೆ ಇರಬಹುದು ಆದರೆ ಅವರು ನನಗೆ ನೀಡಿದ ಚೆಕ್ ನಲ್ಲಿ ಕೆ. ಪೂರ್ಣಿಮಾ ಎಂದು ಸಹಿ ಮಾಡಿ ಕೊಟ್ಟಿರುತ್ತಾರೆ.
11. ಆರೋಪಿ 3-4 ರೀತಿ ಸಹಿ ಮಾಡುವ ಬಗ್ಗೆ ದಾಖಲೆ ನೀಡಿದ್ದೀರಾ ಎಂದರೆ, ನನ್ನ ಬಳಿ ಇಲ್ಲ.
12. ಆರೋಪಿ ನೀವು ಹೇಳುವ ದಿನ ಪಿರಿಯಾಪಟ್ಟಣಕ್ಕೆ ಬಂದಿಲ್ಲ, ಅವರು ಕೆಲಸ ಮಾಡುವ ಜಾಗದಲ್ಲಿ ಅವರು ಕರ್ತವ್ಯಕ್ಕೆ ಹಾಜರಾದ ಬಗ್ಗೆ ದಾಖಲೆ ಇದೆ ಎಂದರೆ, ಸರಿಯಲ್ಲ. ಸದರಿ ದಿನ ಆರೋಪಿ ಬೆಳಿಗ್ಗೆ 9-30 ರಿಂದ 5-00 ಗಂಟೆಯವರೆಗೆ ಅಲ್ಲೆ ಕೆಲಸ ಮಾಡಿರುತ್ತಾರೆ ಎಂದರೆ, ಅವರು ಬಂದು ಹಣ ಪಡೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ.
13. ಆರೋಪಿ ಖರೀದಿಸಿದ ಜಾಗದ ವ್ಯವಹಾರ ಎಷ್ಟು ಹಣಕ್ಕೆ ಆಗಿದೆ ಎಂದರೆ 13 ಲಕ್ಷಕ್ಕೆ ಆಗಿರಬಹುದು. ನನ್ನ ಎದುರಿಗೆ ಆರೋಪಿ ಶ್ವೇತಾ ರವರಿಗೆ 5 ಲಕ್ಷ ಹಣ ನೀಡಿರುತ್ತಾರೆ. ಆ ಸಮಯದಲ್ಲಿ ನಾನು ಹಾಗು ವಕೀಲರು ಕೀರ್ತಿರಾಜ್ ಕುಮಾರ್, ಶ್ವೇತಾ, ಆರೋಪಿ ಹಾಗೂ ಇತರರು ಇದ್ದೆವು.
14. ಶ್ವೇತಾ ರವರ ಕಡೆಯಿಂದ ನಿಮಗೆ ಹಣ ಬರಬೇಕಿತ್ತಾ ಎಂದರೆ, ಇಲ್ಲ.
15. ಆರೋಪಿ ಜೊತೆ ನಾನು ಆಗಾಗ ಹಣಕಾಸು ವ್ಯವಹಾರ ಮಾಡುತ್ತಿದ್ದೆ. ಆ ರೀತಿ 25 ಸಾವಿರ, 50 ಸಾವಿರದಂತೆ 3-4 ಸಲ ಮಾಡಿರಬಹುದು.
16. ಆರೋಪಿ ಸಹ ನಿಮಗೆ ಹಣ ನೀಡಿದ್ದಾರಾ ಎಂದರೆ ಇಲ್ಲ.
17. ನಿಮ್ಮ ಖಾತೆ ನಂಬರ್.000491357054 ಎಂದರೆ ನನಗೆ ಪಾಸ್ ಬುಕ್ ನೋಡಿ ಹೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ. ಆರೋಪಿ ನಿಮಗೆ ದಿಃ 04.04.2024 ರಲ್ಲಿ 2 ಲಕ್ಷ 50 ಸಾವಿರ ವರ್ಗಾವಣೆ ಮಾಡಿದ್ದಾರೆ ಎಂದರೆ, ನಿವೇಶನ ಖರೀದಿ ಮಾಡಿದ ಹಣ ನನ್ನ ಮೂಲಕ ಕೊಡಿಸಿರುತ್ತಾರೆ.
18. ಸದರಿ ಖರೀದಿ ವ್ಯವಹಾರವನ್ನು ನೀವೇ ನಿಂತು ಮಾಡಿಸಿದ್ದೀರಾ ಎಂದರೆ, ಅವರೇ ನನ್ನನ್ನು ಕರೆದಿರುತ್ತಾರೆ ಎಂದು ನುಡಿಯುತ್ತಾರೆ.
19. ಆರೋಪಿಯೊಂದಿದಿಗೆ ನೀವು ಹಿಂದೆ ಯಾವುದೇ ಹಣದ ವ್ಯವಹಾರ ಮಾಡಿಲ್ಲ ಎಂದರೆ ಸರಿಯಲ್ಲ.

20. ನೀವು ಮಧ್ಯಸ್ತಿಕೆ ಮಾಡಿ ಮಾಡಿದ ವ್ಯವಹಾರದ ಸಲುವಾಗಿ ಕಮಿಷನ್ ಬೇಕು ಎಂದು ಆರೋಪಿ ಬಳಿ ಕೇಳಿರುತ್ತೀರಾ ಎಂದರೆ ಸರಿಯಲ್ಲ. ಆಗ ಆರೋಪಿ ಕಮಿಷನ್ ನೀಡುವುದಿಲ್ಲ ಎಂದು ಹೇಳಿದ ಕಾರಣ ನಿಮಗೆ ಅವರಿಗೆ ಮಾತುಕತೆಯಾಗಿರುತ್ತದೆ ಎಂದರೆ ಸರಿಯಲ್ಲ.

21. ಆಗ ನೀವು ಆರೋಪಿಗೆ ಸರಿಯಾಗಿ ಬುದ್ದಿ ಕಲಿಸುತ್ತೇನೆ ಎಂದು ಬೆದರಿಕೆ ಹಾಕಿರುತ್ತೀರಾ ಎಂದರೆ ಸರಿಯಲ್ಲ. ನಂತರ ನೀವು ಪೂರ್ಣಿಮಾ ಕೆ. ಕುಟ್ಟಪ್ಪ ನಾಯರ್ ಎಂಬುವವರು ಚೆಕ್ ಹುಡುಕಿ ಆರೋಪಿಯ ಮೇಲಿನ ದ್ವೇಷಕ್ಕಾಗಿ ಬೇರೆಯವರ ಚೆಕ್ ಮೂಲಕ ಆರೋಪಿಯ ಮೇಲೆ ಸುಳ್ಳು ದೂರು ಹಾಕಿದ್ದೀರಾ ಎಂದರೆ ಸರಿಯಲ್ಲ.

22. ನಿಪಿ - 1ರ ಚೆಕ್ ಆರೋಪಿಗೆ ಹಾಗೂ ಅವರ ಖಾತೆಗೆ ಸಂಬಂಧಪಟ್ಟಿದ್ದಲ್ಲ ಎಂದರೆ ಸರಿಯಲ್ಲ. ನಿಪಿ - 1(ಎ)ರ ಸಹಿ ಆರೋಪಿಯ ಸಹಿ ಅಲ್ಲ ಎಂದರೆ ಸರಿಯಲ್ಲ.

23. ಪೂರ್ಣಿಮಾ ಕೆ. ಕುಟ್ಟಪ್ಪ ನಾಯರ್ ಬೇರೆ ಹಾಗೂ ಆರೋಪಿ ಬೇರೆ ಬೇರೆ ಎಂದರೆ, ಆರೋಪಿಯೇ ನನಗೆ ನಿಪಿ - 1ರ ಚೆಕ್ ನೀಡಿದ್ದಾರೆ ಎಂದು ನುಡಿಯುತ್ತಾರೆ.

24. ಆರೋಪಿಯ ತಂದೆ ಹೆಸರು ಏನು ಎಂದರೆ ಅವರೇ ಕುಟ್ಟಪ್ಪ ನಾಯರ್ ಎಂದು ಹೇಳಿದ್ದಾರೆ. ಆರೋಪಿಯ ತಂದೆ ಹೆಸರು ಎ. ಜಯರಾಮ, ಅವರು ನಾಯಕ ಜನಾಂಗದವರು ಎಂದರೆ, ಇರಬಹುದು.

25. ನೀವು ಬೇರೆಯವರ ಚೆಕ್ ದುರುಪಯೋಗಪಡಿಸಿಕೊಂಡು ಹಣ ಪಡೆಯುವ ಚಾಳಿ ಇಟ್ಟುಕೊಂಡಿದ್ದೀರಾ ಎಂದರೆ ಸರಿಯಲ್ಲ.

26. ನಾನು ಯಾವುದೇ ಚೀಟಿ ವ್ಯವಹಾರ ಮಾಡುವುದಿಲ್ಲ.

27. ಆರೋಪಿಯ 10ನೇ ತರಗತಿಯ ಅಂಕಪಟ್ಟಿಯಲ್ಲಿ ಅವರ ತಂದೆ ಹೆಸರು ಜಯರಾಮ ಎಂದು ಇದೆ ಎಂದರೆ ನನಗೆ ಗೊತ್ತಿಲ್ಲ.

28. ಆರೋಪಿಯ ಹೆಸರು ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ, ಪಾನ್ ಕಾರ್ಡ್ ಆದಾಯ ಪ್ರಮಾಣ ಪತ್ರ, ಹಾಗೂ ಕೆಲಸದ ಗುರುತಿನ ಚೀಟಿ ಹಾಗೂ ಬ್ಯಾಂಕ್ ಖಾತೆಯಲ್ಲಿ ಸಹ ಪೂರ್ಣಿಮಾ ಎ.ಜೆ ಎಂದು ಇದೆ ಎಂದರೆ, ನನಗೆ ಗೊತ್ತಿಲ್ಲ, ನಿಪಿ - 1ರ ಚೆಕ್ಕನ್ನು ಅವರೇ ನೀಡಿದ್ದಾರೆ.

29. ಆರೋಪಿಯ ಹೆಸರು ಪೂರ್ಣಿಮಾ ಎ.ಜೆ ಹೊರತು ಪೂರ್ಣಿಮಾ ಕೆ. ಕುಟ್ಟಪ್ಪ ನಾಯರ್ ಅಲ್ಲ ಎಂದರೆ ಸರಿಯಲ್ಲ.
30. ನೀವು ಆರೋಪಿಗೆ ನೀಡಿದ ನೊಟೀಸ್ ನಲ್ಲಿ ಪೂರ್ಣಿಮಾ ಕೆ. ಎಂದು ನೀಡಿದ್ದರಿಂದ ಆರೋಪಿ ಪ್ರತ್ಯುತ್ತರ ನೀಡಲು ಆಗಿಲ್ಲ ಎಂದರೆ, ಅವರ ಮನೆ ಮತ್ತು ಬ್ಯಾಂಕ್ ವಿಳಾಸ ಎರಡಕ್ಕೂ ಸಹ ಕಳಿಸಿದ್ದೇವೆ ಎಂದು ನುಡಿಯುತ್ತಾರೆ. ಅವರ ವಿಳಾಸ ಸರಿ ಇಲ್ಲ ಎಂದು ವಾಪಸ್ ಬಂದಿವೆ ಎಂದರೆ, ಸರಿಯಲ್ಲ.
31. ನ್ಯಾಯಾಲಯದ ಮೂಲಕ ನೀಡಿದ ಸಮನ್ಸ್ ಸಹ ಅಪೂರ್ಣ ವಿಳಾಸ ಎಂದು ವಾಪಸ್ ಬಂದಿದೆ ಎಂದರೆ ಸರಿಯಲ್ಲ.
32. ಆರೋಪಿಯಿಂದ 3 ಲಕ್ಷ ಸುಳ್ಳು ಪಾಯಿದೆ ಹೊಂದಲು ಅವರ ವಿರುದ್ಧ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ, ಅವರು ಹಣ ಕೊಡಬೇಕಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದಾರೆ ಎಂದು ನುಡಿಯುತ್ತಾರೆ.
33. ಆರೋಪಿಗೆ ನಿಮ್ಮ ಬಳಿ ಹಣ ಪಡೆಯುವ ದರ್ದು ಇರಲಿಲ್ಲ ಎಂದರೆ ಸರಿಯಲ್ಲ.
34. ನಿಮಗೆ ಆರೋಪಿಗೆ 3 ಲಕ್ಷ ಹಣ ನೀಡುವ ಚೈತನ್ಯ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ